ಶ್ರೀ ಜಿ. ಎಸ್. ಬಸವರಾಜು.—ಇಲ್ಲಿ ಕ್ಷೇತ್ರವಾರು ಹಣ ಖರ್ಚಾದ ವಿವರಗಳನ್ನು ಕೊಟ್ಟಿದ್ದಾರೆ. ಯಾವ ಯಾವ ಹರಿಜನ ವಾಡದಲ್ಲಿ ಎಷ್ಟೆಷ್ಟು ಹಣ ಖರ್ಚಾಗಿದೆ ಎಂಬ ವಿವರಗಳನ್ನು ಪ್ರತ್ಯೇಕವಾಗಿ ಕೊಡಲು ಸಾಧ್ಯವಿಲ್ಲವೇ? ಇಲ್ಲಿ ಕೆಲವು ಕ್ಷೇತ್ರಗಳಲ್ಲಿ ಹಣವನ್ನೇ ಖರ್ಚು ಮಾಡಿಲ್ಲ. ಇದರಿಂದ ಒಂದೊಂದು ಕ್ಷೇತ್ರಕ್ಕೂ ತಾರತಮ್ಯ ಮಾಡಿದಂತೆ ಆಗುವುದಿಲ್ಲವೇ? ಈ ತಾರತಮ್ಯವನ್ನು ಹೋಗ ಲಾಡಿಸಲು ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಿಯಾದರೂ ಹಣ ಒದಗಿಸುತ್ತೀರಾ? ಇದರ ಜೊತೆಗೆ ಇನ್ನು ಮುಂದೆ ಈ ರೀತಿ ತಾರತಮ್ಯವಾಗದಂತೆ ನೋಡಿಕೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಡುತ್ತೀರಾ?

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿ ತಾರತಮ್ಯ ಮಾಡುವ ಪ್ರಶ್ನೆಯೇ ಇಲ್ಲ. ಹೊಳೆನರಸೀಪುರಕ್ಕೆ ಕೊಟ್ಟಿರುವುದು. ೦.೧೩ ಲಕ್ಷ ರೂಪಾಯಿಗಳು ಮಾತ್ರ. ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಹೆಡ್ ಆಫ್ ಅಕೌಂಟ್ ೫೩೭೮ರಲ್ಲಿ ೧೦ ಲಕ್ಷ ರೂಪಾಯಿಗಳನ್ನು ಮತ್ತು ಹೆಡ್ ಆಫ್ ಅಕೌಂಟ್ ೫೩೭೮ರಲ್ಲಿ ೪.೮೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಈಗ ಕೆಲಸಗಳಾಗುತ್ತಿವೆ ಆದ್ದರಿಂದ ಇಲ್ಲಿ ತಾರತಮ್ಯ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಹಾಗೆ ನೋಡಿದರೆ ಹೊಳೆನರಸೀಪುರದಲ್ಲಿ ಕೇವಲ ೧೩ ಸಾವಿರ ರೂಪಾಯಿಗಳು ಮಾತ್ರ ಖರ್ಚಾಗಿದೆ.

ಶ್ರೀ ಜಿ. ಎಸ್. ಬಸವರಾಜು.—ನನ್ನ ಕ್ಷೇತ್ರಕ್ಕೆ ಒಂದು ರೂಪಾಯಿ ಕೂಡ ಕೊಟ್ಟಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—೧೫ ಲಕ್ಷ ರೂಪಾಯಿಗಳನ್ನು ನಿಮ್ಮ ಕ್ಷೇತ್ರಕ್ಕೆ ಕೊಡಲಾಗಿದೆ. ಕೆಲಸಗಳು ನಡೆಯುತ್ತಿವೆ. ಈ ಸಲದ ಬಜೆಟ್‌ನಲ್ಲಿ ಅವರ ಕ್ಷೇತ್ರಕ್ಕೆ ೪೦ ಲಕ್ಷ ರೂಪಾಯಿಗಳನ್ನು ಈ ಬಾಬಿಗೆ ಕೊಟ್ಟಿದ್ದೇವೆ. ಆದ್ದರಿಂದ ಇಲ್ಲ ಯಾವ ತಾರತಮ್ಯವೂ ಆಗಿಲ್ಲ.

ಶ್ರೀ ಜಿ. ಎಸ್. ಬಸವರಾಜು.—ನಮ್ಮ ತಾಲ್ಲೂಕ್‌ನಲ್ಲಿರುವ ಹರಿಜನವಾಡ ಕಾಲೋನಿಗಳಲ್ಲಿ ಹೆಚ್ಚು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ತಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಡುತ್ತೀರಾ?

ಶ್ರೀ ಎಚ್. ಡಿ. ದೇವೇಗೌಡ.—ಈಗ ಪ್ರತಿ ಹಳ್ಳಿಯಲ್ಲಿಯೂ ರಸ್ತೆ ಕೆಲಸ ತೆಗೆದುಕೊಳ್ಳುತ್ತೇವೆಂದು ನಾವು ಘೋಷಣೆ ಮಾಡಿದ್ದೇವೆ. ಆದ್ದರಿಂದ ಇದರ ಬಂದೂ ವ್ಯಾಪ್ತಿಯಲ್ಲಿ ಯಾವುದಾದರೂ ಹರಿಜನವಾಡದಲ್ಲಿ ಕೆಲಸಗಳಾಗಬೇಕಾಗಿದ್ದರೆ, ಅದನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ.

ನೀರಲಕೆರೆ ಯಾತ ನೀರಾವರಿ ಯೋಜನ

೯೭೨. ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ದಯವಿಟ್ಟು ಉತ್ತರಿಸುವರೆ ?

ಅ) ಮಲಪ್ರಭ ಎಡದಂಡೆ ಕಾಲುವೆಗೆ ನೀರಲಕೆರೆ ಯಾತ ನೀರಾವರಿ ಯೋಜನೆ ಕೈಗೊಳ್ಳುವ ಬಗ್ಗೆ ಜನರ ಒತ್ತಾಯ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ತಜ್ಞರ ಅಭಿಪ್ರಾಯದಂತೆ ಮಹಾದಾಯಿ ನದಿಯನ್ನು ಮಲಪ್ರಭಾ ಜಲಾಶಯಕ್ಕೆ ಕೂಡಿಸಿ ಸದರಿ ಯೋಜನೆಯನ್ನು ಪ್ರಸಕ್ತ ಸಾಲಿನಲ್ಲಿ ಕಾರ್ಯರೂಪಕ್ಕೆ ತರಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಬಂದಿದೆ.

ಆ) ಮಹದಾಯಿ ಯೋಜನೆಯ ಆನ್ವೇಷಣೆ ಮುಗಿದ ನಂತರ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಈ ಯಾತ ನೀರಾವರಿ ಯೋಜನೆ ಕೈಗೊಳ್ಳಬೇಕೆಂದು ಸುಮಾರು ೫೦-೪೦ ಹಳ್ಳಿಗಳ ಜನರು ಪ್ರತಿವರ್ಷವೂ ಹರತಾಳ ಮಾಡುತ್ತಿದ್ದಾರೆ. ಇದೇ ವಿಚಾರದಲ್ಲಿ ಅಲ್ಲಿನ ನೀಲಕಂಠಸ್ವಾಮಿ ಅವರು ಸುಮಾರು ೩ ತಿಂಗಳ ಕಾಲ ಉಪವಾಸ ಸತ್ಯಾಗ್ರಹ ಮಾಡಿದ್ದಾರೆ ಈ ಹಿಂದಿನ ಸರ್ಕಾರದವರು ಈ ಬಗ್ಗೆ ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್ ಮಾಡಿಸಿದ್ದರು. ಶ್ರೀ ಬಾಳಿಕಾಯಿಯವರು ಅವರು

ಕೂಡ ಈ ಯೋಜನೆಯನ್ನು ಕೈಗೊಳ್ಳಲು ಅಡ್ಡಿಯಿಲ್ಲ ಎಂಬುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಆದ್ದರಿಂದ ಇದೇ ವರ್ಷದಲ್ಲಿ ಈ ಯೋಜನೆಯನ್ನು ಕೈಗೊಳ್ಳುವ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆಯೇ ? ಈ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ, ಆ ಭಾಗದಲ್ಲಿ ಹರಿಯುತ್ತಿರುವ ಮಲಪ್ರಭಾ ನದಿ ಪಕ್ಕದಲ್ಲಿ ಕೆಲವು ಪ್ರೈವೇಟ್ ಲಿಫ್ಟ್ ಇರಿಗೇಷನ್‌ಗಳಿವೆ ಈ ಪ್ರೈವೇಟ್ ಲಿಫ್ಟ್ ಇರಿಗೇಷನ್‌ಗಳನ್ನು ಸೇರಿಸಿಕೊಂಡೇ ಈ ನೇರಲಕೆರೆ ಯಾತ ನೀರಾವರಿ ಯೋಜನೆಯನ್ನು ಮಾಡುವುದಾದರೆ ಸುಮಾರು ೩೦-೪೦ ಹಳ್ಳಿಗಳ ರೈತರಿಗೆ ಅನುಕೂಲವಾಗುತ್ತದೆ, ಅಲ್ಲಿರುವಂತಹ ಬರಡು ಭೂಮಿಗಳೆಲ್ಲಾ ಕಲ್ಪವೃಕ್ಷವಾಗುತ್ತದೆ. ಆದ್ದರಿಂದ ಈ ಯೋಜನೆಯನ್ನು ಜಾಗ್ರತೆ ಕಾರ್ಯಗತ ಮಾಡಿಕೊಟ್ಟರೆ ಅದಕ್ಕೆ ಶ್ರೀ ದೇವೇಗೌಡರ ಹೆಸರನ್ನೇ ಇಡುತ್ತೇವೆ. ಆದ್ದರಿಂದ ಮಾನ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಇದನ್ನು ಮಂಜೂರು ಮಾಡಿಕೊಡುತ್ತಾರೆಂದು ನಾನು ಆಶೆ ಮಾಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಮಾನ್ಯ ಲೋಕೋಪಯೋಗಿ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೭೯ರಲ್ಲಿ ಸರ್ಕಾರ ಆದೇಶ ಕೊಟ್ಟಿದೆ. ಮಾನ್ಯ ಸದಸ್ಯರಾದ ಶ್ರೀಮಾನ್ಯ ಚಿಮ್ಮನಕಟ್ಟಿಯವರು. ಹೇಳಿದಂತೆ ತಪ್ಪನಕಟ್ಟಿ, ಹಳಗೇರಿ, ಬಾದಾಮಿ ಇತ್ಯಾದಿ ಹಳ್ಳಿಗಳಿಗೆ ಉಪಯೋಗವಾಗುವಂತಹ ಯೋಜನೆ, ದಿನಾಂಕ ೧೬-೨-೭೯ರಲ್ಲಿ ಲಿಫ್ಟ್ ಇರಿಗೇಷನ್ ಮಾಡಬೇಕೆಂದು ಸರ್ವೆಯನ್ನು ಮಾಡಿಸಿದ್ದೇವೆ ಈ ಯೋಜನೆಯಲ್ಲಿ ಸುಮಾರು ೭೬ ಕಿಲೋಮೀಟರ್‌ಗಳನ್ನು ಸೇರಿಸಿದ್ದೇವೆ. ಸರ್ಕಾರದವರು ಸುಮಾರು ೮೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ೬೧೭ ಎಕರೆಗಳಿಗೆ ನೀರನ್ನು ಒದಗಿಸಿಕೊಡಬಹುದು. ಅದೇ ರೀತಿಯಾಗಿ ಎರಡನೆಯ ಯೋಜನೆಯಲ್ಲಿ ಕೂಡ ಸುಮಾರು ೫೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ೩೩೫೦ ಎಕರೆಗಳಿಗೆ ನೀರನ್ನು ಒದಗಿಸಿಕೊಡಬಹುದು. ಈ ಬಗ್ಗೆ ಸರ್ಕಾರದವರು ತಾಂತ್ರಿಕ ವರದಿಯನ್ನು ಸಹ ತರಿಸಿಕೊಂಡು ನೋಡಿದ್ದಾರೆ. ಆದ್ದರಿಂದ ಸರ್ಕಾರ ಇದನ್ನು ಪುನರ್ ಪರಿಶೀಲನೆ ಮಾಡಿ ಕೆಲಸವನ್ನು ಪ್ರಾರಂಭ ಮಾಡುತ್ತದೆ.. ಈ ಕೆಲಸ ಹಣದ ತೊಂದರೆಯಿಂದ ನಿಂತು ಹೋಗಿರಲಿಲ್ಲ. ಕೆಲವು ತಾಂತ್ರಿಕ ಅಡ್ಡಿಗಳಿಂದ ಮಾತ್ರ ನಿಲ್ಲಿಸಿತ್ತು, ಇನ್ನು ಅನೇಕ ಕಾರಣಗಳಿಂದ ಈ ಕೆಲಸ ಮಾಡಲು ತಡವಾಯಿತು. ಆ ಕಾರಣಗಳನ್ನು ನಾನು ಸದನದಲ್ಲಿ ಪ್ರಸ್ತಾಪ ಮಾಡುವುದು ಬಹಳ ಕಷ್ಟವಾಗುತ್ತದೆ.

ಶ್ರೀ ಎಫ್. ಎ. ಕೊಪ್ಪದ.—ಮಾನ್ಯ ಅಧ್ಯಕ್ಷರೇ ನಮ್ಮ ಕಡೆಗೂ ಕೂಡ ನೀರಿನ ಸಮಸ್ಯೆ ಇದೆ. ನನಗೂ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ, ನೀವು ದಯಮಾಡಿ ಕುಳಿತುಕೊಳ್ಳಿ.

ರಾಯಚೂರು ತಾಲ್ಲೂಕಿನ ನೀರಾವರಿ ಪ್ರದೇಶದಲ್ಲಿ ನೀರಿನ ಸಮಸ್ಯೆ

೯೨೧. **ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ).**—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ. ರಾಯಚೂರು ತಾಲ್ಲೂಕಿನ ಎಷ್ಟು ಹಳ್ಳಿಗಳಿಗೆ ತುಂಗಭದ್ರಾ ಎಡದಂಡೆ ಕಾಲುವೆ ನೀರನ್ನು ಒದಗಿಸಲಾಗುತ್ತಿದೆ?

ಆ. ಈ ಕಾಲುವೆಯು ಕೊನೆಯಲ್ಲಿರುವ ೩೦ ಹಳ್ಳಿಗಳಿಗೆ ನೀರು ಸರಿಯಾಗಿ ಸಿಕ್ಕದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ. ಹಾಗಿದ್ದಲ್ಲಿ, ಈ ಹಳ್ಳಿಗಳಿಗೆ ನೀರು ಸರಿಯಾಗಿ ಒದಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳನ್ನು ತಿಳಿಸುವುದು?

ಶ್ರೀ ಹೆಚ್. ಡಿ ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ. ೪೭ ಹಳ್ಳಿಗಳಿಗೆ.

ಆ. ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ. ಅನಧಿಕೃತ ಭತ್ತದ ಬೆಳೆಯನ್ನು ತಪ್ಪಿಸುವುದು, ನಾಲೆಯಂನ್ನು ದೀರ್ಘಾವಧಿ ಮುಚ್ಚಿ ನಾಲೆಯ ಒಳಮುಖಿಗಳನ್ನು ಬಲಪಡಿಸಿಕೊಳ್ಳುವುದು ಮತ್ತು ಈ ಕೆಲಸಕ್ಕೆ ಬೇಕಾದ ಹೆಚ್ಚಿನ ಹಣದ ಸೌಲಭ್ಯವನ್ನೊದಗಿಸುವುದು.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಪ್ರಸ್ತಾಪ ಮಾಡತಕ್ಕಂತಹ ವಿಷಯ ತುಂಗಭದ್ರಾ ಎಡದಂಡೆ ಸಮಸ್ಯೆಯಾಗಿದೆ. ಎಲ್ಲಾ ಕಡೆ ಸಮಸ್ಯೆ ಇದೆ. ಇಲ್ಲವೆಂದು ನಾನು